## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC.No. 938/2024**

**CW : 01 PW: 01**

### ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 18.03.2026

| | |
|---|---|
| ಹೆಸರು | : ಗೋಪಾಳೆ ಪಂಡಿತ |
| ತಂದೆಯ ಹೆಸರು | : ಮೇಗಪ್ಪ ಗೋಪಾಳೆ |
| ವಯಸ್ಸು | : 62 |
| ಉದ್ಯೋಗ | : ನಿವೃತ್ತ ಅಬಕಾರಿ ನಿರೀಕ್ಷಕರು |
| ವಾಸಸ್ಥಳ | : ಕಲಬುರಗಿ |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ದಿ: 15/10/2019 ರಿಂದ ಜುಲೈ 2024 ರವರೆಗೆ ನಾನು ಅಬಕಾರಿ ನಿರೀಕ್ಷಕನಾಗಿ ಅಬಕಾರಿ ಉಪ ಆಯುಕ್ತರ ಕಛೇರಿ ಕಲಬುರಗಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ: 17/10/2023 ರಂದು ನಾನು ಶಹಾಬಾದ ಪಟ್ಟಣದಲ್ಲಿ ಗಸ್ತು ಕರ್ತವ್ಯದಲ್ಲಿ ಇದ್ದಾಗ ಲಕ್ಷ್ಮಿಪೂರ ವಾಡಿಯಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಮಾರಾಟ ಮಾಡುತ್ತಿದ್ದಾರೆ ಎಂದು ಒಂದು ಭಾತ್ಮಿ ಬಂದಿತು, ಸದರಿ ಭಾತ್ಮಿಯ ಪ್ರಕಾರ ನಾನು ನಮ್ಮ ಸಿಬ್ಬಂದಿಯೊಡನೆ ರಾವೂರ ಕ್ರಾಸ್ ಬಳಿ ಹೋಗಿ ಅಲ್ಲಿಯೇ ಚಹಾ ಅಂಗಡಿ ಬಳಿ ಕುಳಿತಿರುವ ಇಬ್ಬರು ವ್ಯಕ್ತಿಗಳ ಚಾಸಾ-2 ಮತ್ತು 3 ಇವರನ್ನು ಪರಿಚಯ ಮಾಡಿಕೊಂಡು, ಸದರಿ ದಾಳಿಯ ಭಾತ್ಮಿಯ ಕುರಿತು ಅವರಿಗೆ ತಿಳಿ ಹೇಳಿ ಪಂಚರನ್ನಾಗಿ ಬರಮಾಡಿಕೊಳ್ಳಲು ವಿನಂತಿಸಿದ್ದು ಇರುತ್ತದೆ.

ಸದರಿ ವಿಚಾರವನ್ನು ಚಾಸಾ-1 ಇವರು ಚಾಸಾ-2 ಮತ್ತು 3 ಇವರಿಗೆ ತಿಳಿಸಿದ್ದು ಇರುತ್ತದೆ. ನಂತರದಲ್ಲಿ ನಾನು, ನಮ್ಮ ಸಿಬ್ಬಂದಿಗಳೊಡನೆ ಪಂಚರೊಂದಿಗೆ ಸರ್ಕಾರಿ ವಾಹನ ಸಂಖ್ಯೆಲ ಕೆ.ಎ-32, 0882 ನೇದ್ದರ ಮೂಲಕ ಭಾತ್ಮಿ ಸ್ಥಳಕ್ಕೆ 1.30 ಗಂಟೆಗೆ ಹೋಗಿದ್ದು ಇರುತ್ತದೆ. ಸದರಿ ಮನೆಯನ್ನು ನೋಡಲಾಗಿ ಅಲ್ಲಿ ಒಂದು ಸ್ಟೀಲ್ ಪಾತ್ರೆಯಲ್ಲಿ 10 ಲೀಟರನಷ್ಟು ಕಳ್ಳಭಟ್ಟಿ ಸರಾಯಿ ಹಾಗೂ ಒಂದು ನೀಲಿ ಬಣ್ಣದ ಬ್ಯಾರಲನಲ್ಲಿ 50 ಲೀಟರ ಬೆಲ್ಲದ ಕೊಳೆ ಕಂಡುಬಂದಿತು, ನಾಲ್ಕು ಕೊಡಗಳಲ್ಲಿ ತಲಾ ಒಂದರಲ್ಲಿ 10 ಲೀಟರಿನಂತೆ ಬೆಲ್ಲದ ಕೊಳೆಯು ಕಂಡುಬಂದಿತು.

ದೊರೆತಿರುವ ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡು ಒಂದು ಬಿಳಿ ಚೀಲದಲ್ಲಿ ಕಟ್ಟಿ ಅದನ್ನು ಸೀಲ್ ಮಾಡಿ ಪಂಚರ ಸಹಿಯುಳ್ಳ ಒಂದು ಚೀಟಿಯನ್ನು ಅದಕ್ಕೆ ಲಗತ್ತಿಸಿದ್ದು ಇರುತ್ತದೆ. ಸ್ಥಳದಲ್ಲಿ ನೆರೆದಿರುವ ಜನರಿಗೆ ಕೇಳಲಾಗಿ ಕಳ್ಳಭಟ್ಟಿ ದೊರೆತಿರುವ

ಮನೆಯು ರಾಮಲಾಲ ಚೌಹಾಣ ಇವರಿಗೆ ಸೇರಿರುತ್ತದೆ ಎಂದು ತಿಳಿದು ಬಂದಿತು. ಸ್ಥಳದಲ್ಲಿಯೇ ಪಂಚನಾಮೆಯನ್ನು ಜರುಗಿಸಲಾಯಿತು. ಮಾದರಿ ಮುದ್ರೆ ನಮೂನೆ ತಯಾರಿಸಿ ಠಾಣೆಗೆ ಬಂದು ದೊರೆತಿರುವ ಮುದ್ದೆ ಮಾಲುಗಳು ಹಾಗೂ ಜಪ್ತಿ ಪಂಚನಾಮೆಯೊಂದಿಗೆ ಕಛೇರಿಗೆ ಬಂದು ಸರ್ಕಾರಿ ತರಫಿ ಫಿರ್ಯಾದಿಯನ್ನು ನೀಡಿರುತ್ತೇವೆ. ನಂತರದಲ್ಲಿ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಇರುತ್ತದೆ. ಮುಂದಿನ ತನಿಕೆಗಾಗಿ ಕಡತವನ್ನು ಚಾಸಾ-6 ಇವರಿಗೆ ವಹಿಸಿಕೊಟ್ಟಿರುತ್ತೇನೆ. ಆರೋಪಿ ಪರಾರಿಯಾಗಿರುತ್ತಾನೆ.

3 ಪ್ಲಾಸ್ಟಿಕ ಬಾಟಲಿಗಳನ್ನು ನೋಡಲಾಗಿ, ಅವುಗಳನ್ನು ಕ್ರಮವಾಗಿ ಮು.ಮಾ.1 ರಿಂದ 3 ಎಂದು ನಿಶಾನೆಗೊಳಿಸಲಾಯಿತು. ಪಂಚನಾಮೆಯನ್ನು ನಿ.ಪಿ.1 ಹಾಗೂ ಸಾಕ್ಷಿದಾರರ ಸಹಿಯನ್ನು ನಿ.ಪಿ.1 (ಎ) ಎಂದು. ಶೋಧನಾ ಸಮುಚ್ಚಿತ ವಾರಂಟನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.2 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.2 (ಎ) ಎಂದು, ಮಾದರಿ ಮುದ್ರೆ ನಮೂನೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.3 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.3 (ಎ) ಎಂದು, ಸರಕಾರಿ ತರಫಿ ಫಿರ್ಯಾದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.4 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.4 (ಎ) ಎಂದು, ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.5 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.5 (ಎ) ಎಂದುನಿಶಾನೆಗೊಳಿಸಲಾಯಿತು. ದಿ: 30/10/2023 ರಂದು ಚಾಸಾ-4 ರವರಿಂದ ರಾಸಾಯನಿಕ ಪರೀಕ್ಷೆಗೆ ರಾಯಚೂರಿನ ವಿಧಿ ವಿಜ್ಞಾನ ಕೇಂದ್ರಕ್ಕೆ ಕಳುಹಿಸಿದ್ದು ಇರುತ್ತದೆ. ಪರತ ಬಂದ ವರದಿಯನ್ನು ದಿ: 08/11/2023 ರಂದು ಒಪ್ಪಿಸಿರುತ್ತಾರೆ.

ವಿಶ್ಲೇಷಕರಿಗೆ ಬರೆದ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.6 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.6 (ಎ) ಎಂದು, ಎಫ್.ಎಸ್.ಎಲ್..ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.7 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.7 (ಎ) ಎಂದು, ಚಾಸಾ-4 ಇವರ ಹೇಳಿಕೆಯನ್ನು ನಾನು ಪಡೆದುಕೊಂಡಿರುತ್ತೇನೆ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ</u>**

ಸಾಮಾನ್ಯವಾಗಿ ಗಸ್ತು ಕರ್ತವ್ಯಕ್ಕೆ ಹೋಗಬೇಕಾದರೆ ನಮ್ಮ ಠಾಣೆಯಲ್ಲಿ ಇರುವ ಒಂದು ಕೇಸ್ ಡೈರಿಯಲ್ಲಿ ಅದರ ಬಗ್ಗೆ ನಮೂದು ಮಾಡಿರಬೇಕು ಎಂದರೆ ಸರಿ. ಘಟನೆ ದಿನದಂದು ನಾವು ಗಸ್ತು ಕರ್ತವ್ಯದಲ್ಲಿರುವ ಕುರಿತಾಗಿ ಕೇಸ್ ಡೈರಿಯಲ್ಲಿ ನಮೂದು ಮಾಡಿರುವುದಿಲ್ಲ.

ಭಾತ್ಮಿ ಸ್ಥಳಕ್ಕೆ ಹೋದಾಗ ಸಮಯ 1.30 ಆಗಿತ್ತು. ಭಾತ್ಮಿ ಸ್ಥಳವು ಒಂದು ಆರ್.ಸಿ.ಸಿ. ಮನೆ ಆಗಿರುತ್ತದೆ. ಘಟನಾ ಸ್ಥಳದ ವಿವರಣೆಯನ್ನು ಪಂಚನಾಮೆಯಲ್ಲಾಗಲೀ ಅಥವಾ ಫಿರ್ಯಾದಿಯಲ್ಲಾಗಲೀ ನಮೂದಿಸಿರುವುದಿಲ್ಲ ಎಂದರೆ ಸರಿ. ಘಟನಾ ಸ್ಥಳದಲ್ಲಿ ಸಾಕಷ್ಟು ಜನರ ಸಂಚಾರ ಹಾಗೂ ಅಂಗಡಿ ಹಾಗೂ ಮಳಿಗೆಗಳು ಇರುತ್ತವೆ ಎಂದರೆ ಸರಿ. ಸಾಮಾನ್ಯವಾಗಿ ಪೋಲೀಸರು ಬಂದಾಗ ಸ್ಥಳದಲ್ಲಿ ಜನರು ಸೇರುತ್ತಾರೆ ಎಂದರೆ ಸರಿ. ಘಟನೆಯ ದಿನದಂದು ಸುಮಾರು 5-6 ಜನರು ಘಟನಾ ಸ್ಥಳದಲ್ಲಿ ಇದ್ದರು.

ದೊರೆತಿರುವ ನೀಲಿ ಬಣ್ಣದ ಬ್ಯಾರಲ ಮತ್ತು ಕೊಡಗಳನ್ನು ನಮ್ಮ ತಾಬೆಗೆ ತೆಗೆದುಕೊಂಡಿರುತ್ತೇವೆ ಎಂದರೆ ಸರಿ. ಸದರಿ ಬ್ಯಾರಲ ಹಾಗೂ ಕೊಡಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

ದಿ: 17/10/2023 ರಂದು ನಾನು ಶಹಾಬಾದ ಪಟ್ಟಣದಲ್ಲಿ ಗಸ್ತು ಕರ್ತವ್ಯದಲ್ಲಿ ಇದ್ದಾಗ ಲಕ್ಷ್ಮಿಪೂರ ವಾಡಿಯಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಮಾರಾಟ ಮಾಡುತ್ತಿದ್ದಾರೆ ಎಂದು ಒಂದು ಭಾತ್ಮಿ ಬಂದಿತು, ಸದರಿ ಭಾತ್ಮಿಯ ಪ್ರಕಾರ ನಾನು ನಮ್ಮ ಸಿಬ್ಬಂದಿಯೊಡನೆ ರಾವೂರ ಕ್ರಾಸ್ ಬಳಿ ಹೋಗಿ ಅಲ್ಲಿಯೇ ಚಹಾ ಅಂಗಡಿ ಬಳಿ ಕುಳಿತಿರುವ ಇಬ್ಬರು ವ್ಯಕ್ತಿಗಳ ಚಾಸಾ-2 ಮತ್ತು 3 ಇವರನ್ನು ಪರಿಚಯ ಮಾಡಿಕೊಂಡು, ಸದರಿ ದಾಳಿಯ ಭಾತ್ಮಿಯ ಕುರಿತು ಅವರಿಗೆ ತಿಳಿ ಹೇಳಿ ಪಂಚರನ್ನಾಗಿ ಬರಮಾಡಿಕೊಳ್ಳಲು ವಿನಂತಿಸಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ವಿಚಾರವನ್ನು ಚಾಸಾ-1 ಇವರು ಚಾಸಾ-2 ಮತ್ತು 3 ಇವರಿಗೆ ತಿಳಿಸಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರದಲ್ಲಿ ನಾನು, ನಮ್ಮ ಸಿಬ್ಬಂದಿಗಳೊಡನೆ ಪಂಚರೊಂದಿಗೆ ಸರ್ಕಾರಿ ವಾಹನ ಸಂಖ್ಯೆಲ ಕೆ.ಎ-32, 0882 ನೇದ್ದರ ಮೂಲಕ ಭಾತ್ಮಿ ಸ್ಥಳಕ್ಕೆ 1.30 ಗಂಟೆಗೆ ಹೋಗಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದೊರೆತಿರುವ ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡು ಒಂದು ಬಿಳಿ ಚೀಲದಲ್ಲಿ ಕಟ್ಟಿ ಅದನ್ನು ಸೀಲ್ ಮಾಡಿ ಪಂಚರ ಸಹಿಯುಳ್ಳ ಒಂದು ಚೀಟಿಯನ್ನು ಅದಕ್ಕೆ ಲಗತ್ತಿಸಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ನೆರೆದಿರುವ ಜನರಿಗೆ ಕೇಳಲಾಗಿ ಕಳ್ಳಭಟ್ಟಿ ದೊರೆತಿರುವ ಮನೆಯು ರಾಮಲಾಲ ಚೌಹಾಣ

ಇವರಿಗೆ ಸೇರಿರುತ್ತದೆ ಎಂದು ತಿಳಿದು ಬಂದಿತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸ್ಥಳದಲ್ಲಿಯೇ ಪಂಚನಾಮೆಯನ್ನು ಜರುಗಿಸಲಾಯಿತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಾದರಿ ಮುದ್ರೆ ನಮೂನೆ ತಯಾರಿಸಿ ಠಾಣೆಗೆ ಬಂದು ದೊರೆತಿರುವ ಮುದ್ದೆ ಮಾಲುಗಳು ಹಾಗೂ ಜಪ್ತಿ ಪಂಚನಾಮೆಯೊಂದಿಗೆ ಕಛೇರಿಗೆ ಬಂದು ಸರ್ಕಾರಿ ತರಫೆ ಫಿರ್ಯಾದಿಯನ್ನು ನೀಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರದಲ್ಲಿ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಂದಿನ ತನಿಕೆಗಾಗಿ ಕಡತವನ್ನು ಚಾಸಾ-6 ಇವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಪರಾರಿಯಾಗಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮು.ಮಾ.1 ರಿಂದ 3 ಕ್ಕೂ ಹಾಗೂ ಆರೋಪಿಗೂ ಹಾಗೂ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಮೇಲಾಧಿಕಾರಿಗಳಿಗೆ ಬೆಂಬಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.6 ರಲ್ಲಿ ದಿನಾಂಕ ಹಾಗೂ ತಿಂಗಳುಗಳು ತಿದ್ದುಪಡಿ ಆಗಿರುತ್ತವೆ ಎಂದರೆ ಸರಿಯಲ್ಲ. ನಿ.ಪಿ.1 ರಿಂದ 8 ಎಲ್ಲವೂ ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ :** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**
**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**